ಮಾರ್ಗಸೂಚಿಯನ್ನು ಕೊಡಬೇಕಾಗುತ್ತದೆ. ನೀವು ಎರಡೂವರೆ ಎಕರೆಗಿಂತ ಕಡಿಮೆ ಕೊಡಿ, ಸರಿ ಹೋಗುತ್ತದೆಂದು ಹೇಳುತ್ತಿದ್ದೀರಿ. ನಾವು ಇದನ್ನು ಪುನರ್ ವಿಮರ್ಶೆ ಮಾಡಿ ಒಂದೂವರೆ ಎಕರೆಗೇ ಕೊಡಬಹುದು. ಇದರ ಬಗ್ಗೆ ಜಿಲ್ಲಾ ಪರಿಷತ್ತುಗಳಿಗೆ ಅಧಿಕಾರ ಕೊಡುವುದಕ್ಕಾಗುವುದಿಲ್ಲ.

ರಾಜ್ಯದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಬಗ್ಗೆ.

27(137) ಶ್ರೀ ಮಾಟಳ್ ನಾಗರಾಜ್ (ಚಾಮರಾಜನಗರ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು?

ಆ) ರಾಜ್ಯದಲ್ಲಿ ಇನ್ನು ಎಷ್ಟು ಆರೋಗ್ಯ ಕೇಂದ್ರಗಳ ಅವಶ್ಯಕತೆ ಇದೆ.

ಇ) ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರದವರು ಉದ್ದೇಶಿಸಿದ್ದಾರೆ?

ಡಾ : ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು) :—

ಅ) ರಾಜ್ಯದಲ್ಲಿ ಒಟ್ಟು 1676 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮಂಜೂರಾಗಿದೆ.

ಆ) ರಾಜ್ಯದಲ್ಲಿ 1998ನೇ ಅಂದಾಜು ಮಾಡಿದ ಜನಸಂಖ್ಯೆಯ ಪ್ರಕಾರ ರಾಜ್ಯದಲ್ಲಿ ಗ್ರಾಮೀಣ ಜನಸಂಖ್ಯೆ 3.51. ಕೋಟಿ ಇದ್ದು ಜನಸಂಖ್ಯೆಗೆ ಅನುಗುಣವಾಗಿ 1267 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಅವಶ್ಯಕತೆ ಇದ್ದು, ಈಗಾಗಲೇ 31-3-98ರ ಅಂತ್ಯದ ವರೆಗೆ 1676 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಿದೆ.

ಇ) ರಾಜ್ಯದಲ್ಲಿ 1998-99ನೇ ಸಾಲಿನಲ್ಲಿ 10 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಮಾಟಾಳ್ ನಾಗರಾಜ್ :— ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು ಎಂದು ಕೇಳಿರುವುದಕ್ಕೆ 1676 ಎಂದು ಹೇಳಿದ್ದಾರೆ. ಇನ್ನು ಎಷ್ಟು ಆರೋಗ್ಯ ಕೇಂದ್ರಗಳ ಅವಶ್ಯಕತೆ ಇದೆಯೆಂದರೆ ರಾಜ್ಯದಲ್ಲಿ 1998ನೇ ಇಸ್ವಿಯಲ್ಲಿ ಅಂದಾಜು ಮಾಡಿದ ಜನಸಂಖ್ಯೆಯ ಪ್ರಕಾರ ರಾಜ್ಯದಲ್ಲಿ ಗ್ರಾಮೀಣ ಜನಸಂಖ್ಯೆ 3.51 ಕೋಟಿ ಇದ್ದು, ಈ ಜನಸಂಖ್ಯೆಗನುಗುಣವಾಗಿ 1267 ಪ್ರಾಥಮಿಕ

ಆರೋಗ್ಯ ಕೇಂದ್ರಗಳ ಅವಶ್ಯಕತೆ ಇದೆಯೆಂದು ಹೇಳಿದ್ದಾರೆ. 31-3-98ರ ಅಂತ್ಯದವರೆಗೆ 1676 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರ್ಮಾಡಿದೆ ಎಂದು ಹೇಳಿದ್ದಾರೆ. ಇದು ಒಂದಕ್ಕೊಂದು ಗೊಂದಲ ಇದೆ. ನೇರವಾಗಿ ಇಲ್ಲಿ ಮಂಜೂರಾತಿ ಆಗಿಲ್ಲ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟಿದೆ? ಈಗ ನಡೆಯುತ್ತಾ ಇರತಕ್ಕ ಕೇಂದ್ರಗಳ ಸಂಖ್ಯೆ ಎಷ್ಟು? ಮತ್ತು ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಿದ್ದೀರಿ ಎಂದು ಕೇಳಿರುವುದಕ್ಕೆ 10 ಎಂದು ಹೇಳಿದ್ದೀರಿ, ಇದರ ಬಗ್ಗೆ ನನ್ನದೇನೂ ತಕರಾರು ಇಲ್ಲ. ಮೊದಲನೆಯದು 1676 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮಂಜೂರಾಗಿದೆ ಎಂದು ಹೇಳಿದ್ದೀರಿ. ಹಾಲಿ ಇರುವುದೆಷ್ಟು ಎಂಬುದನ್ನು ತಾವು ಸ್ಪಷ್ಟಪಡಿಸಬೇಕು.

ಡಾ : ಎಂ. ಶಂಕರನಾಯಕ್ (ಆರೋಗ್ಯ ಮಂತ್ರಿಗಳ ಪರವಾಗಿ) :— ಮಾನ್ಯ ಅಧ್ಯಕ್ಷರೇ, ಹಾಲಿ ಇರತಕ್ಕ ಪಿ.ಹೆಚ್.ಸಿ.ಗಳು 1676. ಆದರೆ, ನಮಗೆ ಅವಶ್ಯಕತೆ ಇರತಕ್ಕಂಥಾದ್ದು ಜನಗಣತಿ ಆಧಾರದ ಮೇಲೆ 1,267. ರೂರಲ್ ಜನಸಂಖ್ಯೆ 3.51 ಕೋಟಿ ಇದೆ. ಅದರ ಪ್ರಕಾರ ನಮಗೆ ಇರಬೇಕಾದ್ದು 1,267, ಆದರೆ ಹಾಲಿ ಇರುವುದು 1676. ಅಂದರೆ, ನಮ್ಮ ಅವಶ್ಯಕತೆಗಿಂತ ಹೆಚ್ಚಾಗಿದೆ.

ಶ್ರೀ ಮಾಟಾಳ್ ನಾಗರಾಜ್ :— ಹಾಗಾದರೆ, ಮಂಜೂರಾಗಿದೆ ಎಂದು ಹೇಳಿದರೆ, ಇದೆಯೆಂದು ಅರ್ಥವೇ?

ಡಾ : ಎಂ. ಶಂಕರನಾಯಕ್ :— 10 ಕೇಂದ್ರಗಳಿಗೆ ಮಾತ್ರ ಮಂಜೂರಾಗಬೇಕಾದದ್ದು. ಆದರೆ, ಪಿ.ಹೆಚ್.ಸಿ.ಗಳು 1,676 ಹಾಲಿ ಕೆಲಸ ಮಾಡುತ್ತಾ ಇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಜನಸಂಖ್ಯೆಗೆ ಅನುಗುಣವಾಗಿ ಆಸ್ಪತ್ರೆಗಳು ಬೇಕಾಗಿತ್ತೋ ಅದಕ್ಕಿಂತ ಹೆಚ್ಚು ಮಾಡಿದ್ದೇವೆಂದು ಹೇಳುತ್ತಿದ್ದಾರೆ. ನೀವು ಹೇಳಿದ ಹಾಗೆ ನನಗೆ ಅರ್ಥವಾಗಿದ್ದುದು ರೂರಲ್ ಜನಸಂಖ್ಯೆ 3.51 ಕೋಟಿ ಇದೆ. ಇದಕ್ಕೆ ಎರಡು ಸಾವಿರ ಚಿಲ್ಲರೆ ಆಸ್ಪತ್ರೆಗಳು ಬೇಕು. ಎಂದು ನೀವು ಹೇಳಿದ್ದುದು.

ಅಧ್ಯಕ್ಷರು :— ಅವರ ಉತ್ತರದ ಪ್ರಕಾರ, ಹಾಲಿ ಅಗತ್ಯಕ್ಕಿಂತ ಹೆಚ್ಚಿಗೆ ಪಿ.ಹೆಚ್.ಸಿ.ಗಳು ಮಾಡಲಾಗಿದೆ ಎಂದು ಹೇಳುತ್ತಿದ್ದಾರೆ.

ಡಾ : ಎಂ. ಶಂಕರನಾಯಕ್ :— ಹೌದು. ಅಗತ್ಯಕ್ಕಿಂತ ಹೆಚ್ಚಾಗಿವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಅಗತ್ಯಕ್ಕಿಂತ ಹೆಚ್ಚಾಗಿದೆ ಎಂದು, ಯಾವ ಆಧಾರದ ಮೇಲೆ ಹೇಳುತ್ತಾ ಇದ್ದೀರಿ. ಇವತ್ತು 10-15 ಹಳ್ಳಿಗಳು ಸೇರಿದರೂ ಒಂದು ಆಸ್ಪತ್ರೆ ಇಲ್ಲ.

ಡಾ : ಎಂ. ಶಂಕರನಾಯಕ್ :— 30 ಸಾವಿರ ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಇರಬೇಕೆಂದು ಇದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— 30 ಸಾವಿರ ಜನಸಂಖ್ಯೆಗೆ ಒಂದು ಆರೋಗ್ಯ ಕೇಂದ್ರ ಇರಬೇಕೆಂಬ ತಿಳುವಳಿಕೆ ತಪ್ಪು.

ಅಧ್ಯಕ್ಷರು :— ರೆಡ್ಡಿಯವರೇ ತಾವು ಕನ್‌ಫ್ಯೂಸ್ ಮಾಡಿಕೊಳ್ಳಬೇಡಿ. ಹೆಲ್ತ್ ಸೆಂಟರ್ ಬೇರೆ, ಹೆಲ್ತ್ ಯೂನಿಟ್ ಬೇರೆ. ಅವರು ಹೇಳುತ್ತಿರತಕ್ಕಂಥಾದ್ದು, ಹೆಲ್ತ್ ಸೆಂಟರ್ ಎಂದರೆ, ಅದಕ್ಕೆ ಇಷ್ಟು ಪ್ಯಾರಾ ಫೆರ್ನಾಲಿಯಾ ಇರುತ್ತದೆ. ಬೇರೆ ಪ್ಯಾರಾ ಮೆಡಿಕಲ್ ಸ್ಟಾಫ್ ಎಲ್ಲಾ ಇರುತ್ತಾರೆ. 30 ಸಾವಿರ ಜನಸಂಖ್ಯೆಗೆ ಒಂದು ಹೆಲ್ತ್ ಸೆಂಟರಿನ ಅಗತ್ಯ ಇರುತ್ತದೆ. ಪ್ರೈಮರಿ ಹೆಲ್ತ್ ಯೂನಿಟ್ಸ್ ಬೇರೆ.

ಡಾ : ಎಂ. ಶಂಕರನಾಯಕ್ :— ನೀವು ಹೇಳತಕ್ಕಂಥಾದ್ದು ಕಮ್ಯುನಿಟಿ ಹೆಲ್ತ್ ಸೆಂಟರ್ಸ್. ಇದು ಪ್ರಾಥಮಿಕ ಆರೋಗ್ಯ ಕೇಂದ್ರ. ಕಮ್ಯುನಿಟಿ ಹೆಲ್ತ್ ಸೆಂಟರ್ಸ್., ಒಂದು ಲಕ್ಷ ಜನಸಂಖ್ಯೆಗೆ ಒಂದು. ಆದರೆ, ಪ್ರಾಥಮಿಕ ಆರೋಗ್ಯ ಕೇಂದ್ರ 30 ಸಾವಿರಕ್ಕೆ ಒಂದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನಾನೂ ಅದನ್ನೇ ಹೇಳುತ್ತಾ ಇರುವುದು. ಪ್ರಾಥಮಿಕ ಆರೋಗ್ಯ ಕೇಂದ್ರ ಕೊಡಬೇಕಾದರೆ 30 ಸಾವಿರ ಜನಸಂಖ್ಯೆ ಇರಬೇಕೆಂದು ತಾವು ಹೇಳುತ್ತಿದ್ದೀರಿ. ಆ ಆಧಾರ ಸರಿಯಲ್ಲ. 30 ಸಾವಿರ ಜನಸಂಖ್ಯೆ ಆಗಬೇಕಾದರೆ, ಹಳ್ಳಿಗಾಡಿನಲ್ಲಿ ಈ ಜಿಯಾಗ್ರಾಫಿಕಲ್ ಕಂಡೀಷನ್‌ನಲ್ಲಿ ಸುಮಾರು 25 ಕಿಲೋಮೀಟರ್ ರೇಡಿಯಸ್ ಬೇಕಾಗುತ್ತದೆ. ಹಾಗಾಗಿ ಜನ ಯಾರೂ ಆಸ್ಪತ್ರೆಗೆ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಅದು ಅವೈಜ್ಞಾನಿಕವಾದ ಲೆಕ್ಕಾಚಾರವಾಗಿದೆ. ಇದನ್ನು ನೀವು ಬದಲಾವಣೆ ಮಾಡಬೇಕು. ಇಲ್ಲದೇಹೋದರೆ, ನೀವು ಅಗತ್ಯಕ್ಕೆ ಅನುಗುಣವಾಗಿ ಆಸ್ಪತ್ರೆಗಳನ್ನು ಕಟ್ಟುವುದಕ್ಕಾಗುವುದಿಲ್ಲ.

ಶ್ರೀ ಎ. ನಾರಾಯಣಸ್ವಾಮಿ :— ಮಾನ್ಯ ಅಧ್ಯಕ್ಷರೇ, ಸರ್ಕಾರದ ಅಂಕಿಅಂಶಗಳನ್ನು ನಾನು ಒಪ್ಪಲೇಬೇಕಾಗಿದೆ. ಪ್ರಾತಮಿಕ ಆರೋಗ್ಯ ಕೇಂದ್ರಗಳು ಜನಸಂಖ್ಯೆಗೆ ಅನುಗುಣವಾಗಿವೆಯೋ ಅಥವಾ ಹೆಚ್ಚಾಗಿವೆಯೋ ಎಂದು ನೋಡಿ. ಬೆಂಗಳೂರು ನಗರದಲ್ಲಿ 27 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ಆರೋಗ್ಯ ಸಮಿತಿಯವರು, ಜಿಲ್ಲಾ ಸಮಿತಿಯ ಅಧ್ಯಕ್ಷರು, ಎಲ್ಲಾ ಸದಸ್ಯರೂ ಹೋಗಿದ್ದಾರೆ. ಈ 27 ಆರೋಗ್ಯ ಕೇಂದ್ರಗಳಿಗೂ ಅಂದರೆ, 10ರಿಂದ 15ರವರೆಗೂ ಯಾವುದೇ ಹಣಕಾಸಿನ ತಪಾಸಣೆಗೆ ಹೋಗುವುದಿಲ್ಲ. ಇವು ನಿರುಪಯೋಗವೆಂದೂ, ಇವುಗಳನ್ನು ಗ್ರಾಮೀಣ ಪ್ರದೇಶಕ್ಕೆ

ತಪಾಸಣೆಗೆ ಹೋಗುವುದಿಲ್ಲ. ಇವು ನಿರುಪಯೋಗವೆಂದೂ, ಇವುಗಳನ್ನು ಗ್ರಾಮೀಣ ಪ್ರದೇಶಕ್ಕೆ ಬದಲಾವಣೆ ಮಾಡಬೇಕೆಂದು ಸರ್ಕಾರಕ್ಕೆ ಒಂದು ಆದೇಶ ಬಂದಿದೆ. ಪ್ರಸ್ತಾವನೆ ಕಳುಹಿಸಿಕೊಟ್ಟಿದ್ದೇವೆ. ಆದರೆ, ಇದುವರೆಗೂ ಬದಲಾವಣೆ ಮಾಡಲಿಲ್ಲ. ಅವಶ್ಯಕತೆ ಇರುವುದಿಲ್ಲ. ಡಾಕ್ಟರುಗಳು ಎಲ್ಲಿರುತ್ತಾರೆ, ಅಲ್ಲಿನ ಸಿಬ್ಬಂದಿ ಎಲ್ಲಿರುತ್ತಾರೆ, ಎಲ್ಲಿಗೆ ಹೋಗುತ್ತಾರೆ ಎಂಬುದೇ ಅರ್ಥವಾಗುವುದಿಲ್ಲ. ಇಂತಹ ನಿರುಪಯುಕ್ತ ಆಸ್ಪತ್ರೆಗಳನ್ನು ಏತಕ್ಕೋಸ್ಕರ ಇಟ್ಟುಕೊಂಡಿದ್ದೀರಿ ಎಂಬುದನ್ನು ದಯವಿಟ್ಟು ಹೇಳಬೇಕಾಗಿದೆ. ಬೆಂಗಳೂರು

12.10 ಪಿ.ಎಂ.

ಬೆಂಗಳೂರು ನಗರದಲ್ಲಿ ಲೀವ್ ರಿಜರ್ವ್ ಡಾಕ್ಟರ್ಸ್ ಇದ್ದಾರೆ. ಮಾನ್ಯ ಸದಸ್ಯರು ಕೆಲವರು ಹೇಳುತ್ತಿದ್ದರು ಕೆಲವು ಕಡೆ ಡಾಕ್ಟರ್ಸ್ ಇರುವುದಿಲ್ಲ ಎಂದು. ಲೀವ್ ರಿಜರ್ವ್ ಡಾಕ್ಟರ್ಸ್ ಏತಕ್ಕೆ ಇದ್ದಾರೆ? ಅವರು ಮಂತ್ರಿಗಳ ಸುತ್ತಾ, ಶಾಸಕರ ಸುತ್ತಾ ಸುತ್ತುವುದಕ್ಕೆ ಇದ್ದಾರಾ ಎಂದು ತಿಳಿಸಬೇಕು.

ಶ್ರೀ ಜಗದೀಶ್ ಶೆಟ್ಟರ್:— ಮಾನ್ಯ ಅಧ್ಯಕ್ಷರೇ, ಈ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಪ್ರಾರಂಭ ಮಾಡುವುದಕ್ಕೆ ಸರ್ಕಾರ ಯಾವ ಅಳತೆಗೋಲನ್ನು ಅನುಸರಣೆ ಮಾಡುತ್ತಿದೆ? ನಾನು ಕಳೆದ ಎರಡು ಮೂರು ವರ್ಷಗಳಿಂದ ಹೆಬ್ಬಸೂರು ಗ್ರಾಮಕ್ಕೆ ಅದು ಸುಮಾರು 15 ಸಾವಿರ ಜನಸಂಖ್ಯೆ ಇರುವಂತಹ ಒಂದು ದೊಡ್ಡ ಗ್ರಾಮ, ಸರ್ಕಾರ 30 ಸಾವಿರಕ್ಕೂ ಜಾಸ್ತಿ ಇರುವ ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಎಂದು ಹೇಳುತ್ತಿದ್ದಾರೆ. ಕೆಲವು ಕಡೆ 4-5 ಸಾವಿರ ಜನಸಂಖ್ಯೆ ಇರುವಂತಹ ಕಡೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಿದ್ದೀರಿ. ಅದಕ್ಕೆ ಒಂದು ಸ್ಪಷ್ಟವಾದ ನೀತಿಯನ್ನು ಸರ್ಕಾರ ಅನುಕರಣೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಡಾ: ಎಂ. ಶಂಕರನಾಯಕ್:— ಮಾನ್ಯ ಅಧ್ಯಕ್ಷರೇ, ನೀತಿಯನ್ನು ಮಾಡಬೇಕಾದವರು ಕೇಂದ್ರ ಸರ್ಕಾರ. ಆ ಗೈಡ್ ಲೈನ್ಸ್‌ನಲ್ಲಿ ಏನು ಹೇಳುತ್ತದೆ, 30 ಸಾವಿರ ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಇರಬೇಕೆಂದು ಹೇಳುತ್ತದೆ. ಆ ಒಂದು ಆಧಾರದ ಮೇಲೆ ಏನು ಪ್ರಸ್ತಾವನೆಗಳು ಡಿ.ಎಚ್.ಓಗಳಿಂದ ಜಿಲ್ಲಾಪಂಚಾಯತ್ ಮುಖಾಂತರ ಸರ್ಕಾರಕ್ಕೆ ಬರುತ್ತದೆ ಅವುಗಳನ್ನು ನಾವು ಪರಿಶೀಲನೆ ಮಾಡಿ ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ. ಎಲ್ಲಿ ಅವಶ್ಯಕತೆಗಿಂತ ಹೆಚ್ಚಿಗೆ ಇದೆ ಅದನ್ನು ನೋಡಿ, ಈಗ ಉದಾಹರಣೆಗೆ ಕೂರ್ಗ್ ಆಗಿರಬಹುದು, ಮಲೆನಾಡು ಆಗಿರಬಹುದು, ಅಲ್ಲಿ ದೂರ ದೂರ ಪ್ರದೇಶಗಳಲ್ಲಿ ಗ್ರಾಮಗಳು ಇರುವುದರಿಂದ ಅಂತಹ ಕಡೆ ನಾವು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪನೆ

ಮಾಡಿದ್ದೇವೆ. ಸುಮಾರು 400 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ನಾವು ಅವಶ್ಯಕತೆಗಿಂತ ಹೆಚ್ಚಿಗೆ ಸ್ಥಾಪನೆ ಮಾಡಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ ಈಗಾಗಲೇ ಬೆಂಗಳೂರಿನಲ್ಲಿ ಏನು 27 ಇವೆ ಅವುಗಳನ್ನು ರೂರಲ್ ಏರಿಯಾಗೆ ಶಿಫ್ಟ್ ಮಾಡಬೇಕೆನ್ನುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆ ಅದನ್ನು ಮಾಡುವುದಕ್ಕೆ ಆದಷ್ಟು ಬೇಗ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತೇವೆ. ಲೀವ್ ರಿಜರ್ವ್ ಪೋಸ್ಟ್‌ಗಳು ಡಿ.ಎಚ್.ಓ. ಕಛೇರಿಯಲ್ಲಿ ಮಾತ್ರ ಒಂದು ಅಥವಾ ಎರಡು ಮಾತ್ರ ಇರುತ್ತವೆ. ತಾಲ್ಲೂಕು ಮಟ್ಟದಲ್ಲಿ ಡಾಕ್ಟರ್ಸ್ ಯಾರಾದರೂ ರಜೆಯ ಮೇಲೆ ಹೋದರೆ ಅಲ್ಲಿಗೆ ಅವರನ್ನು ಹಾಕಬೇಕೆನ್ನುವ ಉದ್ದೇಶದಿಂದ ಮಾಡಿದ್ದೇವೆಯೇ ಹೊರತು ಹೆಚ್ಚು ಲೀವ್ ರಿಜರ್ವ್ ಪೋಸ್ಟ್‌ಗಳು ಇರುವುದಿಲ್ಲ. ಇಡೀ ಜಿಲ್ಲೆಗೆ ಸಂಬಂಧಪಟ್ಟಂತೆ ಲೀವ್ ರಿಜರ್ವ್ ಪೋಸ್ಟ ಇರತಕ್ಕಂಥಾದ್ದು. ಅನಾವಶ್ಯಕವಾಗಿ ನಾವು ಡಾಕ್ಟರ್ಸ್‌ನ್ನು ಅಲ್ಲಿ ಇರುವಂತೆ ಮಾಡುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಅಧ್ಯಕ್ಷರೇ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಯಾವ ಯಾವ ರೋಗಗಳಿಗೆ ಔಷಧಿಯನ್ನು ಕೊಡುತ್ತಾರೆಂದು ನಾನು ತಿಳಿದುಕೊಂಡಿರುವುದು, ಸಣ್ಣ ರೋಗಗಳಿಗೆ, ಅಂದರೆ ಜ್ವರ, ತಲೆನೋವು, ಬೇಧಿ, ಇಂತಹ ಖಾಯಿಲೆಗಳಿಗೆ ಮಾತ್ರ ಔಷಧಿಯನ್ನು ಕೊಡುತ್ತಾರೆ. ಬೇರೆ ದೊಡ್ಡ ದೊಡ್ಡ ಖಾಯಿಲೆಗಳಿಗೆ ಅಲ್ಲಿರತಕ್ಕ ಡಾಕ್ಟರ್ಸ್ ಸಿಟಿಯಲ್ಲಿ ಇರತಕ್ಕಂಥಾ ಆಸ್ಪತ್ರೆಗಳಿಗೆ ಹೋಗಬೇಕೆಂದು ಚೀಟಿಯನ್ನು ಬರೆದು ಕೊಡುತ್ತಾರೆ. ಈ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಔಷಧಿಯನ್ನು ತಾವು ಯಾವ ರೀತಿ ವಿತರಣೆ ಮಾಡುತ್ತೀರಿ? ಅನೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಔಷಧಿಗಳು ಇಲ್ಲದೇ ಇರತಕ್ಕಂಥಾದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ? ಕೆಲವರಿಗೆ ರಕ್ತದ ಒತ್ತಡ ಇರುತ್ತದೆ. ಇನ್ನು ಕೆಲವರಿಗೆ ಸಿಹಿ ಮೂತ್ರ ರೋಗ ಇರುತ್ತದೆ. ಇಂತಹ ಖಾಯಿಲೆಗಳ ಸಾಮಾನ್ಯ ತಪಾಸಣೆಗೆ ತಾವು ಏನಾದರೂ ವ್ಯವಸ್ಥೆ ಇಲ್ಲಿ ಮಾಡುತ್ತೀರೋ? ಅನೇಕ ಹಳ್ಳಿಗಳಲ್ಲಿ ನಾಗರಹಾವು ಕಡಿತಕ್ಕೆ ತಕ್ಷಣ ಔಷಧಿ ಇಲ್ಲ. ಹುಚ್ಚು ನಾಯಿ ಕಡಿದರೆ ಅದಕ್ಕೆ ತಕ್ಷಣ ಔಷಧಿ ಇಲ್ಲ. ಕುದರೆ ಕಡಿದರೆ ಅದಕ್ಕೆ ಔಷಧಿ ಇಲ್ಲ. ಕತ್ತೆಗಳು ಕಡಿದರೆ ಅದಕ್ಕೆ ಔಷಧಿ ಇಲ್ಲ. ಈ ವ್ಯವಸ್ಥೆ ಇರುವಾಗ ಇದು ಅತ್ಯಂತ ಪ್ರಾಮುಖ್ಯವಾದುದು. ಇದುವರೆಗೂ ತಾವು ಯಾವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಈ ವ್ಯವಸ್ಥೆಯನ್ನು ಮಾಡಿಲ್ಲ. ಈ ಬಗ್ಗೆ ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದ್ದೀರಿ.

ಡಾ : ಎಂ. ಶಂಕರನಾಯಕ್ :— ಮಾನ್ಯ ಅಧ್ಯಕ್ಷರೇ, ಯಾವುದೇ ಒಂದು ಚಿಕಿತ್ಸೆಯನ್ನು ಮೂರು ಹಂತದಲ್ಲಿ ಮಾಡುತ್ತಾರೆ. ಪ್ರಾಥಮಿಕ, ಸೆಕೆಂಡರಿ ಮತ್ತು ಟರ್ಷರಿ ಲೆವೆಲ್‌ನಲ್ಲಿ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಅವರು ಹೇಳಿದ ರೀತಿಯಲ್ಲಿ ಸಣ್ಣ ಪುಟ್ಟ ಖಾಯಿಲೆಗಳಿಗೆ ಔಷಧಿಯನ್ನು ಕೊಡುವುದು. ಅಲ್ಲಿ ಇನ್‌ವೆಸ್ಟಿಗೇಶನ್

ಮಾಡುವುದು ಅಲ್ಲಿ ಆಗದೇ ಇದ್ದರೆ ತಾಲ್ಲೂಕು ಲೆವೆಲ್‌ಗೆ ಆಗಲಿ ಅಥವಾ ಜಿಲ್ಲಾ ಮಟ್ಟಕ್ಕೆ ಆಗಲಿ ಅಧನ್ನು ರೆಫರ್ ಮಾಡಬೇಕೆನ್ನುವ ಉದ್ದೇಶದಿಂದ ಅದನ್ನು ಇಟ್ಟಿರತಕ್ಕಂಥಾದ್ದು. ಇನ್ನು ಕೆಲವು ಕಾರ್ಯಕ್ರಮಗಳು ಏನು ಇವೆ ಫ್ಯಾಮಿಲಿ ಪ್ಲಾನಿಂಗ್ ಇರಬಹುದು, ಪೋಲಿಯೋ ಕಾರ್ಯಕ್ರಮ ಇರಬಹುದು ಇವುಗಳನ್ನು ಮಾಡುವುದಕ್ಕೆ ಎಲ್ಲೆಲಿ 30 ಸಾವಿರ ಜನಸಂಖ್ಯೆ ಇದೆ ಅಲ್ಲಿ ಮಾಡಿದ್ದೇವೆ. ಅಲ್ಲಿ ಲ್ಯಾಬೆಲೆಟರಿ ಇರುತ್ತದೆ ಟೆಕ್ನೀಷಿಯನ್ಸ್ ಇರುತ್ತಾರೆ. ಡಾಕ್ಟರ್ಸ್ ಇರುತ್ತಾರೆ ಅವರು ಎಲ್ಲಾ ತಪಾಸಣೆ ಮಾಡುತ್ತಾರೆ. ಅಲ್ಲಿ ಟ್ರೀಟ್ ಮಾಡುವಂತಹ ಖಾಯಿಲೆಗಳನ್ನು ಅವರು ಮಾಡಬೇಕು, ಅಲ್ಲಿ ಆಗದೇ ಇರುವಂತಹ ಖಾಯಿಲೆಗಳನ್ನು ತಾಲ್ಲೂಕು ಮಟ್ಟಕ್ಕೆ ಅಥವಾ ಜಿಲ್ಲಾ ಮಟ್ಟದ ಆಸ್ಪತ್ರೆಗಳಿಗೆ ರೆಫರ್ ಮಾಡತಕ್ಕಂಥಾ ಕೆಲಸವನ್ನು ಅವರು ಮಾಡಬೇಕು. ಇನ್ನು ಔಷಧಿಗಳ ಸರಬರಾಜು ಎಲ್ಲಾ ಜಿಲ್ಲಾ ಪಂಚಾಯತಿ ಮುಖಾಂತರ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸರಬರಾಜು ಮಾಡತಕ್ಕಂಥಾದ್ದು. ಅದರಲ್ಲಿ ಶೇಕಡ 60 ರಷ್ಟು ಜನರಲ್ ಮೆಡಿಕಲ್ ಸ್ಟೋರ್‌ನಿಂದ ಇನ್ನುಳಿದ ಶೇಕಡ 40 ರಷ್ಟನ್ನು ಆ ಡಾಕ್ಟರ್ಸ್ ತೆಗೆದುಕೊಳ್ಳಬಹುದು ಎಂದು ಈಗ ಮಾಡಿದ್ದೇವೆ. ಡಾಕ್ಟರ್ಸ್‌ಗೆ ಯಾವ ಔಷಧಿ ಬೇಕು ಎನ್ನುವುದನ್ನು ಜಿಲ್ಲಾಪಂಚಾಯತಿಗೆ ಕೊಟ್ಟು ಅಲ್ಲಿಂದ ಔಷಧಿಯನ್ನು ಸರಬರಾಜು ಮಾಡತಕ್ಕಂಥ ಕೆಲಸವನ್ನು ಡಿ.ಎಚ್.ಓ ಮಾಡುತ್ತಿದ್ದಾರೆ. ತಾವು ಹೇಳಿದಂತೆ ನಾಗರಹಾವು ಕಚ್ಚಿದ್ದಕ್ಕೆ, ಹುಚ್ಚು ನಾಯಿಗಳು ಕಚ್ಚಿದ್ದಕ್ಕೆ ನಾಗರಹಾವು ಕಚ್ಚಿದ ವ್ಯಾಕ್ಸಿನ್ ಬಹಳ ದುಬಾರಿ. ಅದರ ಲೈಫ್ ಸ್ಪ್ಯಾನ್ ಬಹಳ ಕಡಿಮೆ. ಆಷ್ಟರೊಳಗೆ ಅದನ್ನು ಉಪಯೋಗ ಮಾಡಬೇಕು. ಜಿಲ್ಲಾ ಪಂಚಾಯತಿಗೆ ನಾವು ಸರ್ಕಾರದ ವತಿಯಿಂದ ಈಗಾಗಲೇ ಸೂಚನೆಯನ್ನು ನೀಡಿದ್ದೇವೆ. ಯಾವ ಯಾವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ರೆಫ್ರಿಜಿರೇಟರ್ ಇದೆ ಅಲ್ಲಿ ನಾವು ಕೊಂಡುಕೊಂಡು ಒಂದು ಬಫರ್ ಸ್ಟಾಕ್‌ನ್ನು 5-6 ಇಡಬೇಕು. ಕನಿಷ್ಟ ಪಕ್ಷ ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಇಡಬೇಕೆನ್ನುವ ಸೂಚನೆಯನ್ನು ಜಿಲ್ಲಾ ಪಂಚಾಯತಿಗಳಿಗೆ ಸರ್ಕಾರದಿಂದ ಸೂಚನೆಯನ್ನು ಕೊಟ್ಟಿದ್ದೇವೆ. ಅನೇಕ ಜಿಲ್ಲಾ ಪಂಚಾಯತಿಗಳಲ್ಲಿ ಇವತ್ತೂ ಮಾಡುತ್ತಿದ್ದಾರೆ. ಕೆಲವು ಸಂದರ್ಭಗಳಲ್ಲಿ ಅವು ಉಪಯೋಗವಾಗುವುದಿಲ್ಲ. ಆದರೂ ಆಷ್ಟೇ ಪ್ರಮಾಣದ ಔಷಧಿಗಳು ಯಾವಾಗಲೂ ಸ್ಟಾಕ್ ಇಡಬೇಕೆನ್ನುವ ಸೂಚನೆಯನ್ನು ಸಹ ಕೊಟ್ಟಿದ್ದೇವೆ. ನಾಯಿ ಕಡಿತದ ಔಷಧಿ ಶಾರ್ಟೇಜ್ ಇದೆ. ನಮ್ಮಲ್ಲಿ ಸಾಕಷ್ಟು ಔಷಧಿ ಬರುತ್ತಿಲ್ಲ ಎನ್ನುವ ಕಾರಣಕ್ಕೆ ಕೆಲವು ಆಸ್ಪತ್ರೆಗಳಲ್ಲಿ ಮಾತ್ರ ಇಟ್ಟಿದ್ದೇವೆ. ಮತ್ತು ಎಲ್ಲೆಲ್ಲಿ ರೆಫ್ರಿಜಿರೇಟರ್ ಇದೆ ಅಲ್ಲಿ ಸ್ಟಾಕ್ ಮಾಡುವಂತೆ ಸೂಚಿಸಿದ್ದೇವೆ.